**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ,**
**ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 56/2016 ಪಿ.ಡಬ್ಲ್ಯುಃ 9

ಸಿ.ಡಬ್ಲ್ಯುಃ 27

| | |
|---|---|
| ಸಾಕ್ಷಿದಾರರ ಹೆಸರು | ಎಸ್.ವಿ.ಗಿರೀಶ್ |
| ತಂದೆಯ ಹೆಸರು | ಎಸ್.ಎಂ.ವಿಶ್ವೇಶ್ವರಯ್ಯ |
| ವಯಸ್ಸು | 50 ವರ್ಷ |
| ಉದ್ಯೋಗ | ಪೊಲೀಸ್ ಉಪಾಧೀಕ್ಷಕರು, ಕಾರವಾರ ಉಪವಿಭಾಗ |
| ವಿಳಾಸ | ಕಾರವಾರ |

ದಿನಾಂಕಃ 05-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ಜೂನ್-2015 ರಿಂದ ಆಗಸ್ಟ್-2016 ರವರೆಗೆ ಮಣಿಪಾಲ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕನಾಗಿ ಎಂದು ಕೆಲಸ ಮಾಡಿರುತ್ತೇನೆ.

2) ದಿನಾಂಕ 11-05-2015 ರಂದು ಮಣಿಪಾಲ ಠಾಣಾ ಗುನ್ನಾ ನಂಬ್ರ 36/2015 ರ ತನಿಖೆಯನ್ನು ಚಾಸಾ -1 ಇವರಿಂದ ಪಡೆದು ಪರಿಶೀಲಿಸಿದೆನು.

3) ದಿನಾಂಕ 20-08-2015 ರಂದು ನಗರ ಸಭೆ, ಉಡುಪಿ ಇವರಿಂದ, ಗುನ್ಹೆ ಜಾಗೆಯ ಕಟ್ಟಡದ ವಿಳಾಸದ ವಿವರವನ್ನು ನಗರ ಸಭೆಯಿಂದ ಪಡೆದಿದ್ದೆ. ಸದರಿ ದಾಖಲೆಯನ್ನು ಈಗ ನೋಡಿ ನಿಶಾನೆ ಪಿ-16 ಎಂದು ಗುರುತಿಸಿದ್ದೇನೆ.

4) ದಿನಾಂಕ 22-08-2015 ರಂದು ಚಾಸಾ -17 ಇವರ ಹೇಳಿಕೆಯನ್ನು ಪಡೆದಿದ್ದೆ.

5) ದಿನಾಂಕ 30-08-2015 ರಂದು ಜಪ್ತಾದ ಮುದ್ದೆಮಾಲುಗಳ ಮಾದರಿಯ ತಪಾಸಣೆಯ ವರದಿ ನಿಪಿ-4 ರಂತೆ ಪಡೆದಿದ್ದೆ. ಇಲ್ಲಿಯವರೆಗಿನ ತನಿಖೆಯ ದಾಖಲೆಗಳಿಂದ ಆರೋಪಿತನ ಮೇಲೆ ಸಾಕಷ್ಟು ಆಪಾದನೆ ಅಂಶಗಳು ಕಂಡು

ಬಂದಿದ್ದರಿಂದ ಆರೋಪಿತನ ಮೇಲೆ ಅಂತಿಮ ತನಿಖಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೆ.

**ಪಾಟೀಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಎ. ವಕೀಲರಿಂದ**

1) ನಿಪಿ-16 ರ ಕಟ್ಟಡ ಇದ್ದ ಜಾಗೆಯ ಸರ್ವೆ ನಂಬ್ರ ಯಾವುದು ಎಂದು ಗೊತ್ತಿಲ್ಲ. ನಿಪಿ-1 ರ ಜಾಗೆ ನಿಪಿ-16 ರಲ್ಲಿ ಹೇಳಿದ ಮಾಲೀಕರಿಗೆ ಸೇರಿಲ್ಲ ಎಂದರೆ ಸರಿಯಲ್ಲ. ನಿಪಿ-4 ರ ವರದಿ ಆರೋಪಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ಆರೋಪಿತನ ಮೇಲೆ ಸಾಕಷ್ಟು ಸಾಕ್ಷ್ಯಧಾರ ಇರದಿದ್ದರೂ ಸಹ ನಾನು ಒಂದು ತಪ್ಪು ಅಂತಿಮ ವರದಿಯನ್ನು ಬರೆದಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.